ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಿದ್ದಾರೆ, ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಿದ್ದಾರೆ, ಜಿಯಾಲಜಿಕಲ್ ಡಿಪಾರ್ಟ್‌ಮೆಂಟ್‌ನವರು ಏನು ಮಾಡುತ್ತಾರೆ, ಇದರ ಬಗ್ಗೆ ಸಮಗ್ರವಾಗಿ ನೋಡಬೇಕಾಗುತ್ತದೆ. ಇಷ್ಟು ಹಾನಿ ಮಾಡಿಕೊಂಡು, ಈ ವಿಚಾರದಲ್ಲಿ ಕಂಟ್ರಾಕ್ಟರುಗಳು, ಪೊಲೀಸರು ಮತ್ತು ಅಧಿಕಾರಿಗಳು ಶಾಮೀಲಾಗಿರುವುದರಿಂದ ಇದು ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಇಂಡಿ ತಾಲ್ಲೂಕು ಮತ್ತೆ ಬೇರೆ ಕಡೆ ನಡೆಯುತ್ತಿದೆ ಆ ಲೆಕ್ಕ ಹಾಗೆ ಬೆಳೆದುಕೊಂಡು ಬರುತ್ತಿದೆ, ಅದಕ್ಕೆ ಏನೂ ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಸರಿಪಡಿಸಬೇಕೆಂದರೆ, ಈಗ ಏನಾಗಿದೆ ಎಂದರೆ, 2003–04 ರಲ್ಲಿ 2.23 ಕೋಟಿ ರೂಪಾಯಿಗಳಾದರೆ ಈ ವರ್ಷ 4.63 ಕೋಟಿ ರೂಪಾಯಿಗಳಾಗಿದೆ. ಇದರಲ್ಲಿ ಹೆಚ್ಚು ಕಡಿಮೆ ಸ್ವಲ್ಪ ಮಾಡಿದ್ದಾರೆ. ಆದರೂ ಕೂಡ 8–9 ಕೋಟಿ ರೂಪಾಯಿಗಳ ವರಮಾನ ಬರಬೇಕಾಗಿತ್ತು ಅದು ಬಂದಿಲ್ಲ. ಅದರ ಬಗ್ಗೆ ಕೂಡ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ರಾಣಿಬೆನ್ನೂರು ನಗರಸಭೆ ಆಸ್ತಿ ಸಿಟಿಎಸ್ ನಂ 2111ನ್ನೆ ಲೀಸ್ ನೀಡಿರುವುದು.

138(2176) ಶ್ರೀ ಶಿವಣ್ಣ ಜಿ. (ರಾಣಿಬೆನ್ನೂರು) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ರಾಣಿಬೆನ್ನೂರು ನಗರದಲ್ಲಿ ಸರ್ಕಾರದ ಅನುಮತಿ ಇಲ್ಲದೆ ಸಿಟಿಎಸ್ ನಂ 2111ರಲ್ಲಿ 33176 ಚದರ ಅಡಿ ಆಸ್ತಿಯನ್ನು ಆಡಳಿತಾಧಿಕಾರಿಗಳು 1972ನೇ ಇಸವಿಯಲ್ಲಿ 99 ವರ್ಷ ಲೀಜ್‌ನ್ನು ಪುಕ್ಕಟೆಯಾಗಿ ಕೊಡಲು ನಗರಸಭೆಗೆ ಅಧಿಕಾರವಿದೆಯೇ;

2. ಕೊಡುವ ಅಧಿಕಾರ ಇದ್ದಲ್ಲಿ ಸದ್ಯ ಇರುವ ನಗರಸಭೆಯ ಆಸ್ತಿಗಳನ್ನು ಹೊಂದಿರುವವರಿಗೆ ಲೀಜ್.ಪ್ರಕಾರ ಪುಕ್ಕಟೆಯಾಗಿ ಏಕೆ ಕೊಡಬಾರದು;

3. ಕೊಡುವ ಅಧಿಕಾರ ಅಥವಾ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುವ ಅಧಿಕಾರ ನಗರಸಭೆಯ ಆಡಳಿತಾಧಿಕಾರಿಯವರಿಗೆ ಇಲ್ಲದೇ ಇದ್ದಲ್ಲಿ ಈ ರೀತಿಯಾಗಿ ಪ್ರಸ್ತಾವನೆಯಾಗಿ ಕಳಿಸಿದ ಆಡಳಿತಾಧಿಕಾರಿಯ ಮೇಲೆ ಯಾವ ಕ್ರಮ ತೆಗೆದುಕೊಳ್ಳಬಹುದು?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಇದಕ್ಕೆ ಸಂಬಂಧಿಸಿದ ಕಡತವು ನ್ಯಾಯಾಲಯದಿಂದ ಹಿಂದಿರುಗಿರುವುದಿಲ್ಲ. ಕಡತವನ್ನು ನ್ಯಾಯಾಲಯದಿಂದ ವಾಪಸ್ಸು ಪಡೆದು ಈ ಮಾಹಿತಿಯನ್ನು ಒದಗಿಸಲಾಗುವುದು.

ಶ್ರೀ ಜಿ.ವಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕೇಳಿರುವ ಪ್ರತಿಯೊಂದಕ್ಕೂ "ಇಲ್ಲ" ಎನ್ನುವ ಉತ್ತರವನ್ನು ಸರ್ಕಾರದವರು ಕೊಟ್ಟಿದ್ದಾರೆ. ಈಗಾಗಲೇ 33000 ಚದರ ಅಡಿಯವರೆಗೆ ಸಂಬಂಧಪಟ್ಟ ಒಂದು ಕ್ಷೇತ್ರದ ಬಿಲ್ಡಿಂಗ್ ಆ ಸಂಸ್ಥೆಯ ಪರವಾಗಿ ಇವತ್ತಿಗೂ ಕೂಡ ಅವರು ನಡೆಸುತ್ತಾರೆಂದಾಗ ಇವರು ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ ಅವರ ಕಬ್ಜಾದಲ್ಲಿರುವುದನ್ನು ನಮಗೆ ಬಿಡಿಸಿ ಕೊಡಬೇಕು. ನಗರಸಭೆಗೆ ಸಂಬಂಧಪಟ್ಟಂತೆ ಅದು ಇರುವುದರಿಂದ ದಯವಿಟ್ಟು ಅದನ್ನು ಬಿಡಿಸಿ ಕೊಡಬೇಕೆಂದು ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಇದು ಸುಮಾರು 32 ವರ್ಷಗಳಷ್ಟು ಹಳೆಯ ವ್ಯಾಜ್ಯ, ಆದರೂ ಕೂಡ ಈಗ ನಮ್ಮ ಮಾನ್ಯ ಶಾಸಕರ ವಿನಂತಿಯ ಮೇರೆಗೆ ಅದರ ಪೇಪರ್‌ಗಳನ್ನು ಕೋರ್ಟಿನಿಂದ ತರಿಸಿ ಆದಷ್ಟು ಬೇಗ ಅದನ್ನು ಯಾವ ರೀತಿಯಾಗಿ ಖಾಲಿ ಮಾಡಿಸಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಜಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ ನಾನು ಎಷ್ಟು ಪತ್ರ ಬರೆದರೂ ಇದಕ್ಕೆ ಉತ್ತರವನ್ನು ಸರ್ಕಾರ ಕೊಟ್ಟಿರುವುದಿಲ್ಲ. ಕೋರ್ಟಿನಲ್ಲಿ ಇರತಕ್ಕಂಥ ವ್ಯಾಜ್ಯ ಇದು. ಸಂಬಂಧಪಟ್ಟ ಮಂತ್ರಿಗಳು ಪ್ರಭಾವಿಗಳು ಇರುವುದರಿಂದ, ಸರಿಯಾದ ಮಾಹಿತಿಗಳನ್ನು ಕೋರ್ಟಿಗೆ ನಗರಸಭೆಯವರು ಕೊಡದಿರುವುದರಿಂದ ಕೋರ್ಟಿನಲ್ಲಿ ನಮ್ಮ ಈ ಕೇಸ್ ಬಿದ್ದು ಹೋಗಿದೆ. ಇದರಿಂದ ನಗರಸಭೆಗೆ ಒಂದು ರೂಪಾಯಿಗಳ ಆದಾಯವಿಲ್ಲ, 99 ವರ್ಷಗಳವರೆಗೆ ಲೀಸ್ ಕೊಟ್ಟಿದ್ದೇವೆಂದು ಹೇಳಿಕೊಂಡು ಬಂದಿದ್ದಾರೆ. 99 ವರ್ಷಗಳ ಲೀಸನ್ನು ಯಾವ ಪ್ರಕಾರವಾಗಿ ಕೊಟ್ಟರು, ಏಕೆ ಅವರು ಮಾಹಿತಿ ಇಲ್ಲವೆಂದು ಹೇಳುತ್ತಿದ್ದಾರೆ. ಇದು ಏನೋ ತಿಳಿಯದಾದ ಪ್ರಶ್ನೆ ಇದೆ. ಒಂದು ಕೋಟಿ ರೂಪಾಯಿಗಳ ಆಸ್ತಿ ಇದು ಇದೆ. ದಯವಿಟ್ಟು ಇದನ್ನು ನಗರಸಭೆಗೆ ಹಸ್ತಾಂತರ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ನಮ್ಮ ಶಿವಣ್ಣನವರು ಪ್ರೆಸಿಡೆಂಟ್ ಇದ್ದಾಗ ಕೋರ್ಟಿಗೆ ಹೋಗಿದ್ದರು, ಧಾರವಾಡ ಡಿಸ್ಟ್ರಿಕ್ಟ್ ಕೋರ್ಟಿಗೆ ಅಲ್ಲಿ ನಮ್ಮ ಕೇಸ್ ಹೋಯಿತು. ಅದು Lessee ಪರವಾಗಿ ಆಗಿರುವುದರಿಂದ ಮುಂದೆ ಅದನ್ನು ಹಾಗೆ ಬಿಡಲಾಗಿದೆ. ಇದು 32 ವರ್ಷದ ಹಳೆಯದಾಯಿತು. ಅದರ ಪೇಪರ್ಸ್ ಕೂಡ ನಮ್ಮ ಸರ್ಕಾರದ ಕಡೆ ಇಲ್ಲ, ಅದನ್ನು ತರಿಸಿ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ಪ್ರಯತ್ನ ಮಾಡಬೇಕು, ಅದನ್ನು ನಾನು ಮಾಡುತ್ತೇನೆ.

ಶ್ರೀ ಜಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ, ನಗರಸಭೆಯಲ್ಲಿ ಈ ಫೈಲ್ ಇದೆ, ಇಲ್ಲವೆಂದು ಅವರು ಸುಮ್ಮನೆ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟಂಥ ಕಾಗದ ಪತ್ರಗಳು ಬೇಕಾದರೆ ನನ್ನ ಹತ್ತಿರ ಇದೆ. 1993 ರಿಂದ ಇದರ ಬಗ್ಗೆ ನಾನು ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದೇನೆ. ಅದರ ವಿಸ್ತೀರ್ಣ 33,000 ಚದರ.ಅಡಿ ಇದೆ. ಅದನ್ನು ಒಂದು ಸಂಸ್ಥೆಗೆ ಅವರು ಪುಕ್ಕಟೆಯಾಗಿ ಕೊಡುತ್ತಾರೆಂದರೆ, ಅದರ ಅರ್ಥ ಏನೆಂದು ನಾವು ತಿಳಿದುಕೊಳ್ಳಬೇಕಾಗಿದೆ. ದಯವಿಟ್ಟು ಅದನ್ನು ನಗರಸಭೆಗೆ ಹಸ್ತಾಂತರ ಮಾಡಿ ಕೊಡಿಸಲೇಬೇಕೆಂದು ಕೇಳಿಕೊಳ್ಳುತ್ತೇವೆ. ಏಕೆಂದರೆ ಅದರಿಂದ ಆದಾಯ ಕೂಡ ಇಲ್ಲ, ಇವತ್ತು ಅದನ್ನು ಹರಾಜು ಹಾಕಿದರೆ ಒಂದು ಕೋಟಿ ರೂ.ಗಳಾಗುತ್ತದೆ, ಬೇಕಾದರೆ ನಾವೇ ಕೊಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಅದರ ಸಂಬಂಧಪಟ್ಟ ಕಾಗದ ಪತ್ರಗಳನ್ನು ತರಿಸಿಕೊಡಲಿ ಅದನ್ನು ಮಾಡುವುದಕ್ಕೆ ನಾವು ಮಾಡುತ್ತೇವೆ. ಸರ್ಕಾರದ ಕಡೆ ಯಾವ ಪೇಪರ್‌ಗಳೂ ಇಲ್ಲ.

ಶ್ರೀ ಜಿ.ಶಿವಣ್ಣ : ಸರ್ಕಾರದ ಕಡೆ ಕಾಗದ ಪತ್ರಗಳು ಇಲ್ಲವೆಂದರೆ ನಾವು ಏನು ಮಾಡುವುದು ಹೇಳಿ ಹಾಗಾದರೆ?

ಅಧ್ಯಕ್ಷರು : ಮಾನ್ಯ ಶಿವಣ್ಣನವರೆ, ಯಾವ ಕಾಗದ ಪತ್ರಗಳು ಸರ್ಕಾರದ ಕಡೆ ಇಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ, ತಮ್ಮ ಕಡೆ ಯಾವುದಾದರೂ ಕಾಗದ ಪತ್ರಗಳು ಇದ್ದರೆ, ಮಾನ್ಯ ಸಚಿವರ ಹತ್ತಿರ ಕುಳಿತುಕೊಳ್ಳಿ ಪರಸ್ಪರ ಚರ್ಚೆ ಮಾಡಿ ಏನಾದರೊಂದು ಪರಿಹಾರವನ್ನು ಕಂಡುಕೊಳ್ಳಿ.

ಶ್ರೀ ಜಿ.ಶಿವಣ್ಣ : ಮಾನ್ಯ ಅಧ್ಯಕ್ಷರೆ, ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ ಸ್ವಾಮಿ. ಮಾನ್ಯ-ಸಚಿವರು ಎಷ್ಟು ದಿವಸದೊಳಗೆ ಅದನ್ನು ವಾಪಸ್ಸು ಕೊಡಿಸುತ್ತಾರೆ ಎನ್ನುವುದನ್ನು ಅವರು ದಯವಿಟ್ಟು ಹೇಳಬೇಕಾಗುತ್ತದೆ. ಅನಧಿಕೃತವಾಗಿ ಆ ಬಿಲ್ಡಿಂಗ್ ಅವರು ತೆಗೆದುಕೊಂಡಿರುವುದರಿಂದ ಎಷ್ಟು ದಿಸದೊಳಗಾಗಿ ತೀರ್ಮಾನ ಮಾಡಿಕೊಡುತ್ತೀರಿ ಎನ್ನುವುದನ್ನು ಹೇಳಿ ಬಿಡಿ. ನಾನು ಅಷ್ಟು ದಿವಸದೊಳಗಾಗಿ ಸಂಬಂಧಪಟ್ಟ ಕಾಗದಪತ್ರಗಳನ್ನು ನಾನು ತೆಗೆದುಕೊಡುತ್ತೇನೆ.

ಶ್ರೀ ಎಸ್.ಆರ್.ಮೋರೆ : ಮಾನ್ಯ ಅಧ್ಯಕ್ಷರೆ, ಇದೇ ಗ್ರೌಂಡಮೇಲೆ ಕೋರ್ಟಿಗೆ ಹೋದಾಗ ಕೋರ್ಟಿನಲ್ಲಿ ಆ ಕೇಸನ್ನು ಮುನಿಸಿಪಾಲಿಟಿಯವರು ಕಳೆದುಕೊಂಡು ಬಿಟ್ಟಿದ್ದಾರೆ. ಅದನ್ನು 32 ವರ್ಷದಿಂದ ಹಾಗೆಯೇ ಬಿಟ್ಟು ಬಿಟ್ಟಿದ್ದಾರೆ, ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು ನಮ್ಮ ಸರ್ಕಾರದಲ್ಲಿ ಇಲ್ಲ. ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿಕೊಟ್ಟರೆ ಅದರ ಆಧಾರದ ಮೇಲೆ ಮತ್ತೇ ನಾವು ಕೋರ್ಟಿನಿಂದ ಪೇಪರ್ ತರಿಸಿ ನಾವು ಮತ್ತು ನೀವು ಕುಳಿತುಕೊಂಡು ಅದರ ಬಗ್ಗೆ ಚರ್ಚೆಯನ್ನು ಮಾಡೋಣ.

ರಾಯಚೂರು ಕ್ಷೇತ್ರದಲ್ಲಿ ಕೈಗೊಂಡ ಮೀನುಗಾರಿಕೆ ಯೋಜನೆಗಳು

2182 ಪಾಪರೆಡ್ಡಿ ಎ. (ರಾಯಚೂರು)ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಯಚೂರು ಕ್ಷೇತ್ರದಲ್ಲಿ ಮೀನುಗಾರಿಕೆ ಇಲಾಖೆಗೆ 2004–05 ರಲ್ಲಿ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು ;

ಆ. ಇಲಾಖೆಯಿಂದ ರೂಪಿಸುವ ಕ್ರಿಯಾ ಯೋಜನೆಗಳು ಹಾಗೂ ಜನರಿಗೆ ನೀಡಿರುವ ಸೌಲಭ್ಯಗಳು ಯಾವುವು ; (ವಿವರಣೆ ನೀಡುವುದು)

ಇ. ಕೈಗೊಂಡ ಯೋಜನೆಗಳು ಜಾರಿಗೊಳಿಸಲಾಗಿದೆಯೇ; ಎಲ್ಲೆಲ್ಲಿ ಹಾಗೂ ಯಾವ ಫಲಾನುಭವಿಗಳಿಗೆ ಯೋಜನೆಗಳನ್ನು ತಲುಪಿಸಲಾಗಿದೆ ಇಂದಿನ ವಾಸ್ತವ ಸ್ಥಿತಿಗತಿಗಳೇನು ತಿಳಿಸುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ. ರಾಯಚೂರು ಜಿಲ್ಲೆಗೆ ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ 2004–05ರಲ್ಲಿ ಸರ್ಕಾರದಿಂದ ರೂ. 14.923 ಲಕ್ಷ ಹಣ ಬಿಡುಗಡೆಯಾಗಿದೆ. ಕ್ಷೇತ್ರವಾರು ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಿರುವುದಿಲ್ಲ.

ಆ. ಇಲಾಖೆಯಿಂದ ರೂಪಿಸಿದ ಕ್ರಿಯಾ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1) ಮೀನುಮರಿ ಉತ್ಪಾದನೆ, ಸಾಕಣೆ ಮತ್ತು ಹಂಚಿಕೆ .

2) ಬಾವಿ ಮತ್ತು ಹೊಂಡಗಳಲ್ಲಿ ಮೀನುಮರಿ ಬಿತ್ತನೆ ಮಾಡುವುದು.

3) ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಮುಖಾಂತರ ಕೊಳ ನಿರ್ಮಾಣಕ್ಕಾಗಿ ಸಹಾಯಧನ ಒದಗಿಸುವುದು.